ಆರ್.ಡಬ್ಲೂಃ 1

ದಿನಾಂಕಃ 13-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ 2 ನೇ ಎದುರುದಾರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1) ಆಥರೈಜೆಶನ್ ಲೇಟರ್ ನಿಆರ್-1
2) ಇನ್ಸೂರನ್ಸ ಪಾಲಿಸಿ ನಿಆರ್-2

ಆದ್ದರಿಂದ ಅರ್ಜಿಯನ್ನು ವಜಾಗೊಳಿಸುವಂತೆ ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಅರ್ಜಿದಾರ ಪರ ಮಾನ್ಯ ವಕೀಲರಿಂದಃ

ಈ ಅಪಘಾತವನ್ನು ನಾನು ಪ್ರತ್ಯೇಕ್ಷ ನೋಡಿಲ್ಲ ಎಂದರೆ ನಿಜ. ನಾನು ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿರುವುದು. ದಿನಾಂಕ 01.06.2018 ರಂದು ಆದ ಅಪಘಾತದ ಬಗ್ಗೆ ಮೃತನ ಹೆಂಡತಿ ತಕ್ಷಣ ಪೊಲೀಸರಿಗೆ ದೂರು ಕೊಟ್ಟಿದ್ದಾಳೆ ಎಂದರೆ ಸಾಕ್ಷಿಯು ಒಂದು ದಿನ ಬಿಟ್ಟು ದಿನಾಂಕ 02.06.2018 ರಂದು ದೂರು ಕೊಟ್ಟಳು ಎನ್ನುತ್ತಾರೆ. ಪಿರ್ಯಾದಿದಾರರು ಕೊಟ್ಟ ದೂರಿನ ಆಧಾರದ ಮೇಲೆ ಪೊಲೀಸರು ಕಲಂ 279, 304(ಎ) ರಡಿಯಲ್ಲಿ ಪರಕರಣ ದಾಖಲಿಸಿಕೊಂಡರು ಎಂದರೆ ಸಾಕ್ಷಿಯು ಆ ಕಲಂ ನಡಿಯಲ್ಲಿ ಪ್ರಕರಣ ದಾಖಲಿಕೊಂಡಿದ್ದು ನಿಜ ಆದರೆ ತನಿಖೆ ಪೂರ್ಣಗೊಳಿಸಿ ಐಪಿಸಿ 302, 201,

120ಬಿ ಸಹ ಕಲಂ 34 ರಡಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎನ್ನುತ್ತಾರೆ. ಪಿರ್ಯಾದಿದಾರರು ಕೊಟ್ಟ ದೂರಿನ ಮೇರೆಗೆ ತನಿಖಾಧಿಕಾರಿಗಳು ಸ್ಥಳ ಪಂಚನಾಮೆ ಮಾಡಿದರು ಎಂದರೆ ನಿಜ. ಪಿರ್ಯಾದಿದಾರರು ಕೊಟ್ಟ ದೂರಿನ ನಂತರ ಅನೀಲ ಅರ್ಜುನ ಈಟಿ ಎನ್ನುವರು ಪೊಲೀಸರಿಗೆ ಇದು ಅಪಘಾತ ಅಲ್ಲ ಇದು ಕೊಲೆ ಕೇಸು ಎಂದು ಸುಳ್ಳು ದೂರು ಕೊಟ್ಟ ಮೇರೆಗೆ ಪೊಲೀಸ ತನಿಖಾಧಿಕಾರಿಗಳು ಸರಿಯಾದ ತನಿಖೆ ಮಾಡದೇ ಐಪಿಸಿ ಕಲಂ 302,201, 120ಬಿ ಸಹ ಕಲಂ 34 ರಡಿಯಲ್ಲಿ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪೊಲೀಸ ತನಿಖಾಧಿಕಾರಿಗಳು ಕಲಂ 302,201, 120ಬಿ ಸಹ ಕಲಂ 34 ರಡಿಯಲ್ಲಿ ಸಲ್ಲಿಸಿದ ದೋಷಾರೋಪಣಾ ಪತ್ರ ಅಡಿಯಲ್ಲಿ ನೊಂದಾಯಿಸಲಾದ ಕೇಸಿನಲ್ಲಿ ಚಿಕ್ಕೋಡಿಯ 7ನೇ ಅಧಿಕ ಸೆಶನ್ಸ ನ್ಯಾಯಾಲಯವು ಎಲ್ಲಾ ಆರೋಪಿತರನ್ನು ಖುಲಾಸೆಗೊಳಿಸಲಾಗಿದೆ ಎಂದರೆ ನಿಜ.ಈ ಪ್ರಕರಣ ಕೊಲೆ ಪ್ರಕರಣವೋ ಅಥವಾ ಇದು ವಾಹನ ರಸ್ತೆ ಅಪಘಾತವೋ ಎಂದು ತಿಳಿದುಕೊಳ್ಳಲು ನಮ್ಮ ಇನ್ಸುರನ್ಸ ಕಂಪನಿಯಿಂದ ನಾವು ಇನ್ವೆಸ್ಟಿಗೆಶನ ಏಜೆನ್ಸಿ ನೇಮಿಸಿ ತನಿಖೆ ಮಾಡಿಸಿರುವುದಿಲ್ಲ. ಈ ಅಪಘಾತಕ್ಕೆ ಸಂಬಂಧ ಪಟ್ಟಂತೆ ಅರ್ಜಿದಾರರು ಕೊಟ್ಟ ದೂರಿನ ಆಧಾರದ ಮೇಲೆ ಈ ಅಪಘಾತದ ಸಂಬಂಧ ದೋಷಾರೋಪಣಾ ಪತ್ರ ಸಲ್ಲಿಸದೇ ಇರುವುದು ಪೊಲೀಸ ತನಿಖಾಧಿಕಾರಿಯ ತಪ್ಪು ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಪಂಚನಾಮೆಯನ್ನು ಪರಿಶೀಲಿಸದೇ ಈ ಅಪಘಾತವು ಟೆಂಪೋ ಟ್ರ್ಯಾಕ್ಸ ಕ್ರುಜರ ವಾಹನ ಸಂಖ್ಯೆ ಕೆಎ-48/ ಎಂ-0271 ಇದರ ಚಾಲಕನ ತಪ್ಪಿನಿಂದ ಆಗಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಮತ್ತು ಇತರ ಆರೋಪಿತರನ್ನು ಮಾನ್ಯ ಸೆಶನ್ಸ ನ್ಯಾಯಾಲಯವು ಕಲಂ 302,201,120ಬಿ ಸಹ ಕಲಂ 34 ಐಪಿಸಿ ಆರೋಪಗಳಿಗೆ ನೀರದೋಷಿ ಎಂದು ನಿರ್ಣಯಿಸಿ ಖುಲಾಸೆಗೊಳಿಸಿದ್ದರು ಸಹ ನಾನು ಈ ಪ್ರಕರಣ

ಅಪಘಾತವಲ್ಲ ಇದು ಕೊಲೆ ಪ್ರಕರಣ ಎಂದು ಸುಳ್ಳಾಗಿ ಪ್ರತಿಪಾದಿಸುದಿದ್ದೆನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.